# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ವ್ಯಾಪಾರ ವ್ಯವಹಾರದ ನಿಮಿತ್ತ ಪ್ರಯಾಣ ಮಾಡಬೇಕಾಗುವುದು. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರು ಕಾಣಿಸಿಕೊಳ್ಳಬಹುದು. ರಾಜಕಾರಣಿಗಳಿಗೆ ಪ್ರಗತಿ. ತಿಂಗಳ ಅಂತ್ಯಕ್ಕೆ ವ್ಯಾಪಾರ ವ್ಯವಹಾರಗಳಲ್ಲಿ ಬೆಳವಣಿಗೆ, ಹಣಕಾಸು ಸ್ಥಿತಿ ಚೆನ್ನಾಗಿರುತ್ತದೆ. ಶುಭ: 9, 12, 22 ಅಶುಭ: 15, 20, 28

**ವೃಷಭ:** ಸಾಮಾಜಿಕ ಹಾಗೂ ರಾಜಕೀಯ ಜೀವನದಲ್ಲಿ ನೆಮ್ಮದಿ. ಉಸಿರಾಟ ಹಾಗೂ ರಕ್ತದೊತ್ತಡದ ಸಮಸ್ಯೆ ಕಾಡಬಹುದು. ಆರೋಗ್ಯವನ್ನು ನಿರ್ಲಕ್ಷಿಸದೆ ಚಿಕಿತ್ಸೆ ಪಡೆದುಕೊಳ್ಳಿ. ತಿಂಗಳ ಮಧ್ಯಭಾಗದಲ್ಲಿ ಉದ್ಯೋಗಸ್ಥರಿಗೆ ಪ್ರಗತಿ. ಆರೋಗ್ಯದಲ್ಲೂ ಚೇತರಿಕೆ. ಶುಭ: 8, 16, 22 ಅಶುಭ: 11, 15, 28





**ಮಿಥುನ:** ವಿವೇಚನೆಯಿಂದ ಕೆಲಸ ಮಾಡಿ. ಕೆಲವರ ಮಾತನ್ನು ನಂಬಿ ನಷ್ಟದ ವ್ಯವಹಾರದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ, ಎಚ್ಚರವಿರಲಿ. ಬಹುಕಾಲದ ವ್ಯಾಜ್ಯಗಳಿಗೆ ಸೂಕ್ತ ಪರಿಹಾರ ದೊರಕಲಿದೆ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ. ಆದಾಯ ಹೆಚ್ಚಲಿದೆ. ಶುಭ: 10, 14, 22 ಅಶುಭ: 13, 18, 25

**ಕರ್ಕ:** ಹೊಸ ಉದ್ಯೋಗ ಸಿಗಲಿದೆ. ಹಣಕಾಸು ವ್ಯವಹಾರಗಳು ಯೋಜನೆಯಂತೆ ನಡೆಯಲಿವೆ. ಕಷ್ಟದ ಕಾರ್ಯಗಳನ್ನು ಸಹ ಅನಾಯಾಸವಾಗಿ ಮಾಡಿ ಮುಗಿಸಲಿದ್ದೀರಿ. ಕುಟುಂಬದಲ್ಲಿ ಶುಭಸುದ್ದಿ. ಅವಿವಾಹಿತರಿಗೆ ವಿವಾಹ ಯೋಗ. ಪ್ರೀತಿಪಾತ್ರರಿಗೆ ಉಡುಗೊರೆ ನೀಡುವಿರಿ. ಶುಭ: 12, 16, 27 ಅಶುಭ: 11, 28, 30





**ಸಿಂಹ:** ಆತ್ಮೀಯರೊಡನೆ ವಿವಾದಗಳು. ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳಿಂದ ಬೇಸರ. ಅನಗತ್ಯವಾಗಿ ಮಾತನಾಡಿ, ತಪ್ಪಿನಲ್ಲಿ ಸಿಲುಕಬೇಡಿ. ಕೆಲಸದ ಸ್ಥಳದಲ್ಲಿ ಬರುವ ಸಮಸ್ಯೆಗಳನ್ನು ಆ ಕ್ಷಣದಲ್ಲೇ ಬಗೆಹರಿಸಲು ಪ್ರಯತ್ನಿಸಿ. ಕೆಲಸಗಳಲ್ಲಿ ಅವಕಾಶಗಳನ್ನು ಹುಡುಕಿ. ಶುಭ: 9, 18, 22 ಅಶುಭ: 11, 19, 29

**ಕನ್ಯಾ:** ಧನಾಗಮನ ಸರಾಗವಾಗಿ ನಡೆಯಲಿದೆ. ಲೇವಾದೇವಿ ವ್ಯವಹಾರಗಳಿಂದ ದೂರವಿರುವುದು ಲೇಸು. ಕುಟುಂಬದ ಜೊತೆಗೆ ಹೆಚ್ಚಿನ ಕಾಲ ಕಳೆಯಲಿದ್ದೀರಿ. ಆತ್ಮೀಯರೊಡನೆ ಮನಸ್ತಾಪ ಆಗದಂತೆ ನೋಡಿಕೊಳ್ಳುವುದು ಒಳ್ಳೆಯದು. ಶುಭ: 10, 18, 24 ಅಶುಭ: 11, 19, 27





**ತುಲಾ:** ಜನಪ್ರಿಯತೆಯೂ, ವಿರೋಧಿಗಳೂ ಹೆಚ್ಚಾಗಲಿದ್ದಾರೆ. ನಿಮ್ಮ ಕಾರ್ಯಗಳಿಗೆ ತಡೆಯೊಡ್ಡುವ ವ್ಯಕ್ತಿಗಳನ್ನು ದೂರವಿಡಿ. ವೈಯಕ್ತಿಕ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ಪತ್ನಿಯ ವಿಚಾರಗಳಿಗೆ ಸಹಮತ ನೀಡಿ. ಆರ್ಥಿಕ ಹಾಗೂ ಶೈಕ್ಷಣಿಕ ಪ್ರಗತಿ. ಶುಭ: 10, 18, 28 ಅಶುಭ: 12, 19, 26

**ವೃಶ್ಚಿಕ:** ನಿಮ್ಮ ಕಾರ್ಯಯೋಜನೆಗಳಿಗೆ ಅಧಿಕಾರಿಗಳ ನೆರವು ದೊರೆಯಲಿದೆ. ಇದರಿಂದ ನಿಮ್ಮ ಕೆಲಸ ಸುಗಮವಾಗಲಿದೆ. ವೈವಾಹಿಕ ಜೀವನವು ಸಂತಸದಾಯಕವಾಗಿರುತ್ತದೆ. ಚರ್ಚಾಕೂಟಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ಆರ್ಥಿಕ ಅನುಕೂಲ ಕಂಡುಬರಲಿದೆ. ಶುಭ: 9, 19, 29 ಅಶುಭ: 11, 15, 22





**ಧನು:** ಮಾನಸಿಕ ಕ್ಲೇಶಗಳು ನಿಮ್ಮ ಅಭಿವೃದ್ಧಿಗೆ ಮಾರಕವಾಗಬಹುದು. ಕುಟುಂಬದಲ್ಲಿ ಅಶಾಂತಿಯ ವಾತಾವರಣ ಗೋಚರಿಸಲಿದೆ. ಕೆಲವು ವ್ಯಕ್ತಿಗಳಿಂದ ನಿಮ್ಮ ಕಾರ್ಯಗಳಲ್ಲಿ ಹಸ್ತಕ್ಷೇಪ ಕಂಡುಬರುತ್ತದೆ. ವ್ಯಾವಹಾರಿಕ ಕ್ಷೇತ್ರದಲ್ಲಿ ಹಿನ್ನಡೆಯಾಗಬಹುದು. ಶುಭ: 11, 15, 28 ಅಶುಭ: 10, 17, 26

**ಮಕರ:** ಉದ್ಯೋಗದಲ್ಲಿ ಉತ್ತಮ ಸ್ಥಾನಮಾನ ಸಿಗಲಿದೆ. ಸಹವರ್ತಿಗಳು ನಿಮ್ಮ ಯೋಜನೆಗಳಿಗೆ ಬೆಂಬಲ ನೀಡಲಿದ್ದಾರೆ. ಸಾಹಿತ್ಯ ವಲಯದಲ್ಲಿ ಉತ್ತಮ ಮನ್ನಣೆ ಗಳಿಸಲಿದ್ದೀರಿ. ಅದೃಷ್ಟದ ಬಾಗಿಲು ತೆರೆಯಲಿದೆ. ಸಂಗಾತಿ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಶುಭ: 12, 18, 29 ಅಶುಭ: 11, 17, 23





**ಕುಂಭ:** ಅಪರಿಚಿತ ವ್ಯಕ್ತಿಗಳನ್ನು ನಂಬಬೇಡಿ, ನಷ್ಟವಾಗಬಹುದು. ವಾಹನದಲ್ಲಿ ಜಾಗ್ರತಿ ವಹಿಸಿ. ಸಂಗಾತಿ ಜೊತೆಗೆ ಕಲಹ ಮಾಡಿಕೊಳ್ಳಬೇಡಿ. ಹಣಕಾಸಿನ ಹರಿವು ಚೆನ್ನಾಗಿರುತ್ತದೆ. ಆರೋಗ್ಯ ಸಾಧಾರಣವಾಗಿರುತ್ತದೆ. ವೃತ್ತಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ಮಾಡಬೇಡಿ. ಶುಭ: 9, 14, 26 ಅಶುಭ: 11, 15, 27

**ಮೀನ:** ಯೋಜನೆಗಳ ಫಲಿತಾಂಶ ವಿಳಂಬವಾಗಬಹುದು. ಸ್ನೇಹಿತರ ಜೊತೆಗೆ ಉತ್ತಮ ಬಾಂಧವ್ಯ ಬೆಳೆಯಲಿದೆ. ನೀವು ಈಗಾಗಲೇ ಮಾಡಿದ ಉತ್ತಮ ಕೆಲಸಕ್ಕೆ ಮೆಚ್ಚುಗೆ, ಮನ್ನಣೆ, ಪುರಸ್ಕಾರಗಳು ಲಭಿಸಲಿವೆ. ಕೌಟುಂಬಿಕ ಜೀವನದಲ್ಲಿ ನೆಮ್ಮದಿ, ಸಂತೃಪ್ತಿ. ಶುಭ: 6, 14, 22 ಅಶುಭ: 12, 18, 29

